ROTARY CLUB OF MOODBIDRI

Celebrating... 57th year of service

Rotary

THE MAGIC OF ROTARY





# ROTADRI

Monthly Bulletin of Rotary Club of Moodbidri

ISSUE - 3 | R.I. Dist 3181 / Zone IV / Charter No.: 15739 | SEPTEMBER - 2024



ತುಂಬಿದೆ ಜೀವಜಲ ಕಡಲಕೆರೆ ಒಡಲಲಿ
ತಂದಿದೆ ನೂರು ಹರುಷ ನಮ್ಮ ಒಡಲ ಗೂಡಲಿ
ನಮ್ಮ ಬದ್ಧತೆ ನಮ್ಮ ಸಿದ್ಧತೆ ನೆಲದ ಜಲದ ರಕ್ಷಣೆ
ಹಸಿರ ಹೊನ್ನು ಕಾಡ ನಡುವೆ ಕೆರೆಯಲೊಂದು ವೀಕ್ಷಣೆ

## ಈ ಸಂಚಿಕೆಯಲ್ಲಿ



ಮೂಡುಬಿದಿರೆ ರೋಟರಿ ಕ್ಲಬ್ಬಿನ
ಹಿರಿಯ ಸದಸ್ಯರಾದ
**ದಿವಂಗತ ಶ್ರೀ ಎಸ್. ಎನ್. ದಿವಾಕರ್**
ಇವರ
**ಮರೆಯಲಾಗದ ನೆನಪು**

ವಿನ್ಯಾಸ:
www.sigma-graphics.com
ಮುದ್ರಣ:
ಸೋನಿ ಪ್ರಿಂಟರ್ಸ್, ಮೂಡುಬಿದಿರೆ
Cover Photo:
Sudha Studio, Moodbidre

- Presidents Desk
- Vistara
- secretary report
- Rotary Quiz & More

EDITORIAL BOARD

Rtn. Ganesh Kamath
Co - editor

Rtn. Sunil
Member

S N Borker
Member

Rtn. Dr. Samarth Bhat
Member

## ಸಂಪಾದಕೀಯ

# ಹಬ್ಬಗಳ ಸಂಭ್ರಮ ದಿನಾಚರಣೆಗಳ ಸಡಗರ

ಕೃಷ್ಣಾಷ್ಟಮಿ ಹಾಗೂ ಗಣೇಶೋತ್ಸವ ಸಂಭ್ರಮ ಮುಗಿದಿದೆ. ಜನ ಸಮುದಾಯ ಜಾತಿ, ಮತ, ಭಾಷೆ, ಬಣ್ಣಗಳ ಚೌಕಟ್ಟುಗಳನ್ನು ಮೀರಿ ಹಬ್ಬದ ಖುಷಿಯಲ್ಲಿ ಮಿಂದು ಎದ್ದಿದ್ದಾರೆ. ಈ ನಡುವೆ ಬಂದ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಹುಟ್ಟು ಹಬ್ಬ ಶಿಕ್ಷಕರ ದಿನಾಚರಣೆ ಹಾಗೂ ಎಲ್ಲರೂ ನೆನಪಿನಲ್ಲಿ ಆಚರಿಸಿದ ಸರ್ ಎಂ. ವಿಶ್ವೇಶ್ವರಯ್ಯ ಅವರ ಹುಟ್ಟಿದ ದಿನವಾದ ಇಂಜಿನಿಯರ್‌ಗಳ ದಿನಾಚರಣೆ ಆ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಲಕ್ಷಾಂತರ ಶಿಕ್ಷಕರು ಹಾಗು ಇಂಜಿನಿಯರ್‌ಗಳಿಗೆ ನಾವು ಗೌರವ ಸಲ್ಲಿಸುವ ಸಡಗರದ ಕ್ಷಣ. ಭವ್ಯ ಭಾರತದ ನಿರ್ಮಾಣದಲ್ಲಿ ಮಹತ್ತರ ಜವಾಬ್ದಾರಿ ನಿರ್ವಹಿಸುವ ಇವೆರಡು ವೃತ್ತಿಗಳು ನಮ್ಮ ಸಮಾಜದ ಹೆಮ್ಮೆಯ ಮುಕುಟ ಮಣಿಗಳು. ನಮ್ಮ ಎಲ್ಲ ಶಿಕ್ಷಕವೃಂದ ಹಾಗು ಇಂಜಿನಿಯರ್‌ಗಳಿಗೆ ನಮ್ಮ ಶುಭಾಶಯಗಳು. ಸುಶಿಕ್ಷಿತ ಸಮಾಜ ನಿರ್ಮಾಣದ ಜವಾಬ್ದಾರಿ ಹೊತ್ತ ಶಿಕ್ಷಕರು ನಮ್ಮ ಜೀವನದಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ. ಅವರು ಕೇವಲ ತರಗತಿಯ ಪಾಠಗಳನ್ನು ಕಲಿಸುವವರಲ್ಲ, ಮುಂದಿನ ಜೀವನದ ಉತ್ತಮ ಮೌಲ್ಯಗಳನ್ನು ತುಂಬುವ, ನಾವಿನ್ನು ಉತ್ತಮ ವ್ಯಕ್ತಿಗಳಾಗಲು ಸಹಾಯ ಮಾಡುವವರೂ ಹೌದು. ಶಿಕ್ಷಣವು ವ್ಯಕ್ತಿಯ ಸಮಗ್ರ ಬೆಳವಣಿಗೆಯನ್ನೂ ಬಯಸುತ್ತದೆ, ಮತ್ತು ಇದನ್ನು ಸಾಧಿಸಲು ಶಿಕ್ಷಕರ ಪಾತ್ರ ಅಮೂಲ್ಯವಾಗಿದೆ.

ಮಕ್ಕಳಿಗೆ ಶಿಕ್ಷಣವನ್ನು ನೀಡುವುದರ ಜೊತೆಗೆ, ಶಿಕ್ಷಕರು ಸಮಾಜದ ಉತ್ತಮ ನಾಗರಿಕರನ್ನು ರೂಪಿಸಲು ಶ್ರಮಿಸುತ್ತಾರೆ. ಮಕ್ಕಳ ಒಳಗಿರುವ ತಾಳ್ಮೆ, ಶಿಸ್ತು, ಸಹನಶೀಲತೆ, ಮತ್ತು ಕಠಿಣ ಪರಿಶ್ರಮಕ್ಕೆ ಪ್ರೇರಣೆ ನೀಡುತ್ತಾರೆ. ಪ್ರತಿಭೆಯ ವಿಕಸನಕ್ಕೆ ನೆರವಾಗುತ್ತಾರೆ. ಶಿಕ್ಷಣದ ಮೂಲಕ ಸಾಧನೆಗೆ ದಾರಿ ತೋರಿಸುವುದರ ಹೊರತಾಗಿ, ಮಕ್ಕಳಲ್ಲಿ ಆತ್ಮವಿಶ್ವಾಸವನ್ನು ಬೆಳಸುವುದು ಮತ್ತು ಅವರ ಸೃಜನಶೀಲತೆಯನ್ನು ಬೆಳಕಿಗೆ ತರಲು ಸಹಾಯ ಮಾಡುವುದೂ ಶಿಕ್ಷಕರ ಕಾರ್ಯವಾಗಿದೆ.

ಶಿಕ್ಷಕರು ಬದುಕಿನ ನೈತಿಕತೆ, ಶಿಸ್ತು, ಸತ್ಕಾರ್ಯ, ಮತ್ತು ಮಾನವೀಯ ಮೌಲ್ಯಗಳನ್ನು ಬೋಧಿಸುತ್ತಾರೆ. ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ತಾಂತ್ರಿಕ, ವಿಜ್ಞಾನ, ಸಮಾಜಶಾಸ್ತ್ರ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಮುಂದುವರಿಯುತ್ತಾರೆ. ಆದರೆ ಅವರ ಬೋಧನೆಯ ಗಾಢತೆ ಕೇವಲ ಪುಸ್ತಕಗಳ ಜ್ಞಾನದಲ್ಲಿ ನಿಲ್ಲದು; ಜೀವನದ ಗತಿಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು, ಸತ್ಯಾಸತ್ಯತೆಗಳನ್ನು ಬೋಧಿಸಲು ಸಹಾಯ ಮಾಡುತ್ತದೆ.

ಭಾರತದ ಸಾಂಸ್ಕೃತಿಕ, ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಗಳಲ್ಲಿ ಇಂಜಿನಿಯರರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ವಿಶ್ವದಾದ್ಯಂತ ನೋಡಿದರೆ ಸಾಫ್ಟ್‌ವೇರ್ ಇಂಜಿನಿಯರಿಂಗ್‌ನಲ್ಲೂ ಭಾರತ ಪ್ರಮುಖ ಸ್ಥಾನವನ್ನು

ಹೊಂದಿದೆ. ವಿಶೇಷವಾಗಿ, ಆರ್‌ಆಂಡಿ, ಆರ್ಕಿಟೆಕ್ಚರ್ ಮತ್ತು ತಂತ್ರಜ್ಞಾನ ಅಭಿವೃದ್ಧಿ ಇಂಜಿನಿಯರಿಂಗ್ ಕ್ಷೇತ್ರಗಳು ಭಾರತದ ಬೆಳವಣಿಗೆಗೆ ಹೊಸ ಮಾರ್ಗಗಳನ್ನು ತೋರಿಸಿವೆ. ಇತರ ದೇಶಗಳನ್ನು ತಂತ್ರಜ್ಞಾನದಲ್ಲಿ ನಾವು ಹಿಂದಿಕ್ಕುತ್ತಿದ್ದೇವೆ ಎನ್ನಲು ಇಂಜಿನಿಯೆರ್‌ಗಳು ದಾರಿ ಮಾಡಿ ಕೊಟ್ಟಿದ್ದಾರೆ. ಆಧುನಿಕ ಯುಗದಲ್ಲಿನಮ್ಮ ನಿತ್ಯ ಜೀವನ ನೋಡಿಕೊಂಡರೆ ಸಾಕು ಗೊತ್ತಾಗುತ್ತದೆ ಇಂಜಿನಿಯರಿಂಗ್ ಮೂಲಕ ಬದಲಾವಣೆಗಳಿಗೆ ಸಾಕ್ಷಿಯಾಗಿರುವುದು ತಿಳಿಯುತ್ತದೆ. ಅವರ ವಿಚಾರಸರಣೆಗಳು ಮತ್ತು ಆವಿಷ್ಕಾರಗಳು ಭಾರತವನ್ನು ತಂತ್ರಜ್ಞಾನದಲ್ಲಿ ಪ್ರಪಂಚದ ಮೊದಲ ರಾಷ್ಟ್ರಗಳ ಸಾಲಿನಲ್ಲಿ ಒಂದಾಗಿ ಮಾಡಿವೆ. ದ್ವ ಮೂಲ ಸೌಕರ್ಯ, ಸಂಚಾರ, ಆರೋಗ್ಯ, ವಿದ್ಯುತ್ ಮತ್ತು ಸಂವಹನ ಹೀಗೆ ಹಲವು ಕ್ಷೇತ್ರಗಳಲ್ಲಿ ಇಂಜಿನಿಯರಿಂಗ್ ಸಂಶೋಧನೆಗಳು ಸುಧಾರಣೆ ಮಾಡುತ್ತಿವೆ.

ಆ ಕಾರಣದಿಂದ ಇಂಜಿನಿಯರರು ನಮ್ಮ ದಿನನಿತ್ಯದ ಜೀವನದಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತಾರೆ. ನಾವು ಪ್ರತಿದಿನ ಬಳಸುವ ಸಾಧನಗಳು, ಸಂಚಾರ ವ್ಯವಸ್ಥೆಗಳು, ಭವನಗಳು, ರಸ್ತೆಗಳಲ್ಲಿ ಇಂಜಿನಿಯರಿಂಗ್‌ನ ಭಾಗವಿದೆ. ಇಂಜಿನಿಯರಿಂಗ್ ನಮ್ಮ ಜೀವನವನ್ನು ಸುಗಮ, ಸುರಕ್ಷಿತ ಮತ್ತು ಆಧುನಿಕಗೊಳಿಸುತ್ತದೆ. ಇಂಜಿನಿಯರರು ಹೊಸ ಆವಿಷ್ಕಾರಗಳನ್ನು ರೂಪಿಸುವ ಮೂಲಕ ನವೀಕೃತ, ಸುಧಾರಿತ, ಮತ್ತು ಸಮರ್ಥ ಸಮಾಜವನ್ನು ನಿರ್ಮಿಸುತ್ತಿದ್ದಾರೆ. ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಹೆಚ್ಚಿನ ಅವಕಾಶಗಳು ಸೃಷ್ಟಿಯಾಗುತ್ತಿರುವುದರಿಂದ, ಯುವಕ–ಯುವತಿಗಳು ಈ ಕ್ಷೇತ್ರವನ್ನು ತಮ್ಮ ಭವಿಷ್ಯದ ಪಥವಾಗಿ ಆಯ್ಕೆ ಮಾಡುತ್ತಿದ್ದಾರೆ. ಉತ್ತಮ ವಿದ್ಯಾಭ್ಯಾಸ, ಪರಿಪೂರ್ಣತೆ, ಮತ್ತು ಶ್ರದ್ಧೆಯಿಂದ, ಇಂಜಿನಿಯರರು ಭಾರತವನ್ನು ತಾಂತ್ರಿಕ ದಿಗ್ಬಂಧನಗಳೆಡೆಗೆ ಮುನ್ನಡೆಸುತ್ತಿದ್ದಾರೆ. ಅನೇಕ ತಾಂತ್ರಿಕ ವಿಚಾರಗಳನ್ನು ಪರಿಹರಿಸುವಲ್ಲಿ ನಿಪುಣರಾಗಿದ್ದಾರೆ. ಭವಿಷ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳು ಸಾಕಷ್ಟು ಬೆಳವಣಿಗೆಯನ್ನು ಕಾಣಲು ಇಂಜಿನಿಯರರು ಅಗತ್ಯವಿದ್ದಾರೆ.




– ರೊ. ರಾಮಚಂದ್ರ ಮಿಜಾರ್

+91 98452 43208

editorrotadri@gmail.com




## ..... Congratulations

# Team RC Moodbidri





PRESIDENT'S DESK

# Welcome to September - Basic Education and Literacy Month



Dear Rotarians,

August was a wonderful month for us, focused on Membership Development and New Club Development. It was filled with many projects, fun, fellowship, and stronger friendships. I am especially happy to share that we successfully completed the installation of all our Interact clubs, giving a strong start to our future leaders. Your active participation and teamwork made it possible.

I also want to thank everyone for making our district seminar 'VISTARA' on membership development, retention, and public image a big success. Your dedication showed our club's commitment to Rotary's goals.

As we step into September, the month of Basic Education and Literacy, let us focus on helping our communities grow through education. I am proud to say that we have beautiful institutions under our Rotary banner, including *State and CBSE schools, as well as a Pre-University College*. These institutions were a dream that our club's leaders turned into reality by taking on the challenge and building a strong foundation for high-standard education.

Today, the outgoing students from these institutions are achieving remarkable success, bringing pride to our club.

Whether it's supporting local schools, donating books, or providing learning resources, every little effort will make a difference. Let's think about how we can do more to promote education. Together, we can ensure everyone gets access to learning and a brighter future.

Thank you again for all your support and energy. Let's continue to work together and make a positive impact.

**Yours in Rotary Service,**

**Rtn. Raviprasad Upadhyaya**

**President**





## ಸಮಾಜಕ್ಕೆ ಬೆಳಕು ನೀಡಿದ ಮಹಾನ್ ಚೇತನ

# ದಿವಂಗತ ಶ್ರೀ ಎಸ್. ಎನ್. ದಿವಾಕರ್

24-09-1942 ರಲ್ಲಿ ಖ್ಯಾತ ನ್ಯಾಯವಾದಿಯಾದ ಶಿರ್ತಾಡಿ ಎಸ್. ನಾಗರಾಜ ಮತ್ತು ನೀರಂಕಿ ಗುತ್ತಿನ ಶ್ರೀಮತಿ ಎಸ್. ಕುಸುಮಾವತಿ ಇವರ ಪುತ್ರನಾಗಿ ಜನಿಸಿ ಮಂಗಳೂರಿನ ಪ್ರತಿಷ್ಠಿತ ಕೆನರಾ ಶಿಕ್ಷಣ ಸಂಸ್ಥೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಪಡೆದು ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಪದವಿ ಪೂರ್ವ ಶಿಕ್ಷಣವನ್ನು ಮುಗಿಸಿ ತದನಂತರ ಬಿ.ಎಸ್ಸಿ ಪದವೀಧರನಾಗಿ ಶ್ರೀಯುತರು ಧಾರವಾಡ ವಿಶ್ವವಿದ್ಯಾನಿಲಯದಲ್ಲಿ ಎಂ.ಎ ಪದವಿ ಪಡೆದು ಎಪಿಗ್ರಾಫಿ ವಿಷಯದಲ್ಲಿ ಪಿ.ಜಿ ಡಿಪ್ಲೋಮಾ ಪಡೆದು 1968 ರಲ್ಲಿ ಪುತ್ತೂರಿನ ವಿವೇಕಾನಂದ ಕಾಲೇಜಿನಲ್ಲಿ ಇತಿಹಾಸ ಉಪನ್ಯಾಸಕರಾಗಿ 5 ವರ್ಷಗಳ ಅಧ್ಯಾಪನ ಕೆಲಸ ಮಾಡಿ, ಮೂಡಬಿದಿರೆ ಜೈನ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ 1973 ರಲ್ಲಿ 27 ವರ್ಷಗಳ ಕಾಲ ಆ ಹುದ್ದೆಗೆ ಕಿಂಚಿತ್ತೂ ಧಕ್ಕೆ ಬಾರದಂತೆ ನಡೆಸಿಕೊಂಡು ಬಂದು, 1979ರಲ್ಲಿ ಶ್ರೀ ಧವಳಾ ಕಾಲೇಜಿನ ಸ್ಥಾಪಕ ಪ್ರಾಚಾರ್ಯರಾಗಿ ಎರಡುವರೆ ವರ್ಷ ಕಾಲ ಸೇವೆ ಸಲ್ಲಿಸಿ, 1974 ರಿಂದ ನಮ್ಮ ರೋಟರಿ ಸಂಸ್ಥೆಯ ಸದಸ್ಯರಾಗಿ ಒಂದೇ ವರ್ಷದಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ರೋಟರಿ ಎಜುಕೇಶನ್ ಸೊಸೈಟಿಯ ಸಂಚಾಲಕರಾಗಿ, ವರ್ಧಮಾನ ಪ್ರಶಸ್ತಿ ಪೀಠದ ಸ್ಥಾಪಕ ಸದಸ್ಯರಾಗಿ, ಅದರ ಖಜಾಂಜಿಯಾಗಿ ದುಡಿದಂತಹ ವ್ಯಕ್ತಿ ಶ್ರೀ ಎಸ್.ಎನ್. ದಿವಾಕರ್.

ಕಾರ್ಕಳ ಮತ್ತು ವೇಣೂರಿನಲ್ಲಿ ನಡೆದ ಮಹಾಮಸ್ತಕಾಭಿಷೇಕದಲ್ಲಿ ಸಭೆ, ಸಾಂಸ್ಕೃತಿಕ ಕಾರ್ಯಕ್ರಮದ ಸಂಚಾಲಕರಾಗಿ, ಮಹಾವೀರ ನಿರ್ವಾಣಾ ಮಹೋತ್ಸವ 2500ನೇ ವರ್ಷಾಚರಣೆಯ ಉತ್ಸವದ ಕಾರ್ಯದರ್ಶಿಯಾಗಿಯೂ ಧರ್ಮಚಕ್ರ ವಿಹಾರದ ಸಂದರ್ಭದಲ್ಲಿ ಅವರ ಕೃತುಶಕ್ತಿ ಅದ್ಭುತವಾಗಿ ಮೆರೆದಿದೆ. ವಿದ್ಯಾರ್ಥಿ ದೆಸೆಯಲ್ಲಿ ಎನ್.ಸಿ.ಸಿ ಯಲ್ಲಿ 'ಸಿ' ಸರ್ಟಿಫಿಕೇಟ್ ಪಡೆದು ಕಾಶ್ಮೀರದಲ್ಲಿ ನಡೆದ ಅಡ್ವಾನ್ಸ್ ಲೀಡರ್‌ಶಿಪ್ ತರಬೇತಿ ಶಿಬಿರದಲ್ಲಿ ಕರ್ನಾಟಕದ ಐದು ಕೆಡೆಟ್‌ಗಳಲ್ಲಿ ಶ್ರೀ ಎಸ್.ಎನ್. ದಿವಾಕರ್ ಸಹಾ ಒಬ್ಬರು. ಆ ಶಿಸ್ತನ್ನು ತನ್ನ ಜೀವಮಾನವಿಡಿ ಉಳಿಸಿಕೊಂಡಂತಹ ವ್ಯಕ್ತಿಯೇ ಶ್ರೀ ಎಸ್.ಎನ್ ದಿವಾಕರ್.

1973 ರಲ್ಲಿ ಬಲ್ಲಾಳ್ ಮನೆತನದ ಶ್ರೀಮತಿ ವಸುಂಧರಾಳೊಂದಿಗೆ ದಾಂಪತ್ಯ ಜೀವನ ಪ್ರಾರಂಭಿಸಿದ್ದು ಅವರ ಮದುವೆಯ ಸಮಯದಲ್ಲಿ ಪಲ್ಲಕಿಯಲ್ಲಿ ಕುಳಿತು ಧವಳಾ ಕಾಲೇಜಿನ ಸಂಸ್ಥೆಯೊಳಗೆ ಪ್ರವೇಶಿಸಿ ರಾಜಮರ್ಯಾದೆಯನ್ನು ಗಳಿಸಿಕೊಟ್ಟವರು. ತನಗೆ ಕೀರ್ತಿಗೊಂದು ಆರತಿಗೊಂದು ಎಂಬಂತೆ ಮಗ ಮತ್ತು ಮಗಳನ್ನು ಪಡೆದವರಾಗಿರುತ್ತಾರೆ.
ಮೂಡಬಿದಿರೆ ಜೈನ್‌ಮಿಲನ್‌ನ ಸದಸ್ಯರಾಗಿ 1998-99 ರಲ್ಲಿ ಅಧ್ಯಕ್ಷರಾಗಿ ಅದರ ಹೆಸರನ್ನು ಉತ್ತುಂಗಕ್ಕೆ ಕೊಂಡೊಯ್ದು, ಅನೇಕ ಧಾರ್ಮಿಕ ಸಮಾರಂಭಗಳಲ್ಲಿ ತಮ್ಮ ಅಪಾರ ಧರ್ಮಜ್ಞಾನವನ್ನು ಸಮಾಜಕ್ಕೆ ಉಣಬಡಿಸಿರುತ್ತಾರೆ.

ತಾರೀಕು 30-09-2000ರಂದು ತಮ್ಮ ವೃತ್ತಿ ಜೀವನದಿಂದ ನಿವೃತ್ತಿ ಹೊಂದಿದ್ದರೂ ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಂಡು ಮೂಡಬಿದಿರೆ ರೋಟರಿ ಸಂಸ್ಥೆಯಲ್ಲಿ, ರೋಟರಿ ಎಜುಕೇಶನ್ ಸೊಸೈಟಿಯಲ್ಲಿ ಅದರ ಕೀರ್ತಿ ಉತ್ತುಂಗಕ್ಕೆ ಏರಲು ಶ್ರೀ ಎಸ್.ಎನ್ ದಿವಾಕರ್ ಸಹ ಒರ್ವರು. ಶ್ರೀ ಮಹಾವೀರ ಕಾಲೇಜಿನ ಟ್ರಸ್ಟಿಯಾಗಿ ಎಸ್.ಡಿ ಸಾಮ್ರಾಜ್ಯರು ಗತಿಸಿದ ನಂತರ ಅಂದರೆ 2006 ರಿಂದ ಅದರ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ. ಅವರು ಅಧ್ಯಕ್ಷರಾಗಿರುವ ಅಂದರೆ 2007ರಲ್ಲಿ ಅವರು ಗತಿಸುವವರೆಗೆ ಅಧ್ಯಕ್ಷರಾಗಿದ್ದವರು. ಶ್ರೀ ಎಸ್.ಎನ್ ದಿವಾಕರ್ ಯಾವತ್ತೂ ಹೊಗಳಿಕೆಗೆ ಬೆಲೆಕೊಡದೆ ತೆಗಳಿಕೆಗೆ ತಲೆಕೆಡಿಸಿಕೊಳ್ಳದೇ ತಮ್ಮ ಕಾರ್ಯದಲ್ಲಿ ಮಗ್ನರಾಗಿ ಯಾರೊಡನೆಯೇ ದ್ವೇಷ ಭಾವನೆ ಇಲ್ಲದೇ ಸಮಾಜದ ಎಲ್ಲಾ ವ್ಯಕ್ತಿಗಳೊಡನೆ ಬೆರೆತು ತಾನೂ ಪ್ರಾಂಶುಪಾಲರಾಗಿದ್ದರೂ ಸಮಾಜದಲ್ಲಿ ನಾನೊಬ್ಬ ಕಿರಿಯ ವ್ಯಕ್ತಿಯೆಂದು ಹೇಳಿಕೊಂಡು ಕೆಲಸ ಮಾಡುತ್ತಿದ್ದ

ಶ್ರೀ ಎಸ್.ಎನ್ ದಿವಾಕರ್‌ರನ್ನು ಮರೆಯಲು ಸಾಧ್ಯವಿಲ್ಲ. ಯಾವತ್ತೂ ತನ್ನ ಘನತೆಯನ್ನು ಉಳಿಸಿಕೊಂಡು ಸಮಾಜದ ಸಮಾಜಮುಖಿ ಕೆಲಸ ಪೂರೈಸಿ ಕೀರ್ತಿಶೇಷರಾದ ಕೆಲವೇ ವ್ಯಕ್ತಿಗಳ ಪೈಕಿ ಶ್ರೀ ಎಸ್.ಎನ್ ದಿವಾಕರ್ ಸಹಾ ಒರ್ವ ಶ್ರೇಷ್ಠ ವ್ಯಕ್ತಿಯೆಂದರೆ ಅತಿಶಯೋಕ್ತಿ ಆಗಲಾರದು. ವ್ಯಕ್ತಿಗೂ ವ್ಯಕ್ತಿತ್ವಕ್ಕೂ ಇರುವ ವ್ಯತ್ಯಾಸವನ್ನು ತಿಳಿದುಕೊಂಡು ಯಾರೊಡನೆ ಹೇಗೆ ಮಾತು ಎಂದು ಮೊದಲೆ ಅರ್ಥೈಸಿಕೊಂಡು ಅವರೊಡನೆ ಮಾತನಾಡುವ ವಿಧಾನ ನಿಜಕ್ಕೂ ಒಂದು ಮಾದರಿಯಾಗಿತ್ತು. ನನ್ನಂತಹ ಕಿರಿಯ ವ್ಯಕ್ತಿ ಅವರ ಅಪಾರ ಜ್ಞಾನ ಭಂಡಾರದಿಂದ ಕೆಲವು ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯವಾಗಿತ್ತು. ಅವರ ಜ್ಞಾನ ಭಂಡಾರವನ್ನು ಮೆಚ್ಚಿದವರಲ್ಲಿ ನಾನು ಸಹ ಒಬ್ಬನು.

ಸಮಾಜ ಮಂದಿರದ ಟ್ರಸ್ಟಿಯಾಗಿ ಅದರ ಅಭಿವೃದ್ಧಿಯಲ್ಲಿ ಸರ್ವತೋಮುಖವಾಗಿ ದುಡಿದು ಇಂದು ಮೂಡಬಿದಿರೆಯ ಸಮಾಜ ಮಂದಿರವು ಒಂದು ಪ್ರತಿಷ್ಠಿತ ಸಂಸ್ಥೆಯಾಗಿದೆ ಎಂಬುದಕ್ಕೆ ಅದರ ಅಭಿವೃದ್ಧಿಗಾಗಿ ಹಗಲಿಗೆ ಹಗಲು ಕೊಟ್ಟವರಲ್ಲಿ ಶ್ರೀ ಎಸ್.ಎನ್. ದಿವಾಕರ್ ಒಬ್ಬರು.

ಗುಣಕ್ಕೆ ಮತ್ಸರವಿಲ್ಲವೆಂಬಂತೆ ಇದ್ದುಕೊಂಡು ತನ್ನ 65ನೇ ವರ್ಷದಲ್ಲಿ ಅಂದರೆ 11–09–2007ರಲ್ಲಿ ತಮ್ಮ ಸಾರ್ಥಕ ಜೀವನವನ್ನು ಕಿರಿ ವಯಸ್ಸಿನಲ್ಲಿಯೇ ಈ ಜಗತ್ತಿಗೆ ವಿಧಾಯ ಹೇಳಿ, ತಾನು ಮಾಡಿದ ಒಳ್ಳೆಯ ಕೆಲಸಗಳನ್ನು ಸಮಾಜದವರು ಗುರುತಿಸುವಂತೆ ಮಾಡಿ ತಾನು ಗತಿಸಿದ್ದರೂ ಅವರು ಹಾಕಿ ಕೊಟ್ಟ ದಾರಿಯಲ್ಲಿ ನಡೆಯುವಂತೆ ಮಾಡಿದ ಮಾಹನ್ ದಿವ್ಯ ಚೇತನಕ್ಕೆ ಪ್ರಣಾಮಗಳನ್ನು ಸಲ್ಲಿಸಲೇಬೇಕು. ಸಮಾಜವು ಅದಕ್ಕಾಗಿ ಶ್ರೀ ಎಸ್.ಎನ್. ದಿವಾಕರ್‌ರಿಂದ ಮಾಡಿಸಿಕೊಳ್ಳಲು ತವಕಪಟ್ಟಿದ್ದರೂ ಸಹ ಅವರನ್ನು ವಿಧಿ ಕೊಂಡುಹೋಗದೇ ಬಿಡಲಿಲ್ಲ.

ಸಂಸ್ಕೃತದ ಮಾತಿನಂತೆ "ಅನಾಯಾಸೇನ ಮರಣಂ ವಿನಾ ದೈನ್ಯೇನ ಜೀವನಂ" ತಮ್ಮ ಜೀವಿತ ಅವಧಿಯಲ್ಲಿ ಯಾರಿಗೂ ತಲೆ ಬಾಗದೇ ಧೈರ್ಯದಿಂದ ಮುನ್ನುಗ್ಗಿ ಅನಾಯಾಸವಾಗಿ ಜಿನಪಾದ ಸೇರಿದ ಶ್ರೀ. ಎಸ್. ಎನ್. ದಿವಾಕರ್‌ರವರಿಗೆ ನಮ್ಮ ಆಶ್ರುತರ್ಪಣ. "ಹುಟ್ಟು ನಿಶ್ಚಿತ ಸಾವು ಅನಿಶ್ಚಿತ" ಎಂಬಂತೆ ತಮ್ಮ 65ನೇ ವಯಸ್ಸಿನಲ್ಲಿಯೇ ತಮ್ಮ ಎಲ್ಲಾ ಕೆಲಸಗಳನ್ನು ಬದಿಗೊತ್ತಿ ಈ ಮೂಡುಬಿದಿರೆಯ ಎಲ್ಲಾ ಸಂಬಂಧಗಳನ್ನು ಶಾಶ್ವತವಾಗಿ ಬಿಟ್ಟು ಪರಲೋಕಗೈದ ಶ್ರೀ ಎಸ್. ಎನ್. ದಿವಾಕರ್ ಇವರ ಹೆಸರು ಶಾಶ್ವತ. ತನ್ನ ಪ್ರಿನ್ಸಿಪಾಲ್ ಹುದ್ದೆಯಿಂದ ನಿವೃತ್ತರಾದರೂ ಆ ಗಾಂಭೀರ್ಯ, ಗತ್ತುಗಳನ್ನು ಉಳಿಸಿಕೊಂಡು ಹಿತ–ಮಿತಭಾಷಿಯಾದರೂ ರೋಟರಿಯಲ್ಲಿ ಎಲ್ಲರೊಡನೆ ಒಂದು ಗೂಡಿ ನಾನೂ ನಿಮ್ಮಂತೆಯೇ ಎಂಬ ಭಾವನೆಯಿಂದ ಬದುಕಿಬಂದವರು. ಇಂತಹ ಸಮಾಜಮುಖಿ, ನಿರ್ಗವಿ, ಗಾಂಭೀರ್ಯ, ಗತ್ತುಗಳನ್ನು ಉಳಿಸಿಕೊಂಡು ದೇಹ ನಶ್ವರವಾದರೂ ಆತ್ಮ ಮೂಡಬಿದಿರೆಯ ಪರಿಸರದಲ್ಲಿಯೇ ಆಗು–ಹೋಗುಗಳನ್ನು ವೀಕ್ಷಿಸುತ್ತಿರಬಹುದು ಎಂಬ ಭಾವನೆ ಅವರ ಸಹೃದಯೀ ಮಿತ್ರರಿಗೆ ಅನಿಸಿದರೆ ಆಶ್ಚರ್ಯವಿಲ್ಲ.

ಇಂತಹ ದಿವ್ಯ ಚೇತನಕ್ಕೆ ನನ್ನಂತಹ ಹಲವು ಅವರ ಒಡನಾಡಿಗಳು ಅವರ ನೆನಪನ್ನು ಸದಾ ನೆನಪಿನಲ್ಲಿಡುವ ಒಂದು ಅವಕಾಶ ಮಾಡಿಕೊಟ್ಟ 'ರೋಟಾದ್ರಿ' ಗೆ ಚಿರಋಣಿ.

**– ರೊ. ಕೆ.ಆರ್ ಪಂಡಿತ್**
ಮಾಜಿ ರೋಟರಿ ಅಧ್ಯಕ್ಷರು




**WE MEET EVERY MONDAY**
**@ 7.30 pm**
**ROTARY SAMMILANA HALL, MOODBIDRI**

**IF IT'S MONDAY**
**IT MUST BE ROTARY!**




# Vistara – OUR DREAM COME TRUE !

Cheers! Here is to us and to our astounding achievement!!!

I remember that day, sometime in the 2nd week of June, when our Rotary Governor Elect for 2024-25 invited our club members to host the District Seminar on Membership Development, Retention, Club Extension, and Public Image.

Pat went our reply, Invitation accepted, Yes we will gladly host it, were the words uttered by our beloved incoming club President Rtn. Ravi Prasad Upadhyaya to the District Governor Elect Rtn. Vikramdatta after having consulted his future board of directors.

Then came the sincere request to me by Rtn. Ravi Prasad to take up the position of Event Chairman for this prestigious event. Initially, I was a bit hesitant but soon relented to his persistent request.

Our Rotary club, in its 57 years of existence, had definitely earned the credit of successfully hosting a large number of seminars like PETS & SETS, PRESERVE PLANET EARTH, RYLA, MEMBERSHIP DEVELOPMENT SEMINARS, and so on. I had taken a very active role every time. I was confident of being successful, but more than all this, I knew I could trust our members. They would put in every effort to make this event a successful and memorable one.

In mid-July, we started taking our 1st steps towards planning the event. A series of meetings were conducted, and several committees were formed. Each committee was formed with a perfect blend of experienced and young members. Groups of 4-5 members were formed, and these groups visited most of the neighboring clubs of Zone I to Zone V to invite the club members to the event. Everywhere we were given a warm welcome & hospitality. My heartfelt gratitude to my 25+ fellow Rotarians who kept their evenings free for a continuous 10-12 days in order to complete the tremendous feat of inviting the members of the other clubs.

Away from the limelight, working silently day and night was our hero, our President Rtn. Ravi Upadhyaya. He organized

beautiful mementoes for our delegates as well as a uniform "Modi coat" for us, the 94 host Rotarians. Then a couple of weeks before the event, the Rain Gods decided to play truant. It rained for days. Till then, we were expecting a full house registration. We had a target of the magic number – 500 delegates – but probably because of the heavy rains, the registrations were coming in very slowly, and we were disappointed. It was back to work at coaxing the other club members again – This time through innumerable telephonic calls and WhatsApp messages. This gesture did work, and soon the registrations started going up again, and by the final day, our elation knew no bounds as we hit the record number of 604.

Rejuvenated, energized, and motivated by the high number of registrations, it was a happy lot of host Rotarians looking handsome and elegant in their Modi coats, who stood at the entrance, at the registration counter, at the food, and at all the strategic points of the venue, The Kandiga Greens, welcoming, smiling, shaking hands with affectionate hospitality as the guests started arriving for the event. The Rain God too remained kind and loving, and it did not rain throughout the event.

Every little arrangement had been tuned to perfection. To add to this, our Keynote Speaker PDG Deepak Purohit of District 3131, our Resource Person PDG Gopinath of District 3160, D.G. Vikramdatta, and members of our District Secretariat spoke eloquently on the subject, and the delegates imbibed a lot of knowledge about Membership Development and Public Image. The stage decor was dignified and attractive, our Masters of Ceremony were impressive, and all the members played the role designated to each one of them to perfection.

From the bottom of my heart, I thank each one of you for being such incredible Rotarians who have given your best to work together as one unit and pave the way for tremendous success.

Delegates exclaimed, "Venue spacious, food superb, hospitality wonderful, speakers par excellence, members beautiful, function superb. What more can the host club members ask for except to happily sigh in contentment? Yes! MISSION ACCOMPLISHED – CLUB NAME AND FAME RETAINED & TARGET ACHIEVED."

Before I conclude, a special note of thanks to President Ravi for excellent arrangements for veg and non-veg food. Overall, the Seminar was a grand success. Thanks to the immense efforts put in by President Rtn. Upadhyaya, Event Co-Chairman Rtn. Bahubali Prasad, Event Secretary Rtn. Shrikanth Kamath, Event Treasurer Rtn. Yathi Kumar, the Club Secretary Rtn. Rathnakara Jain, and the sincere work put in by each and every member to make this event memorable, eventful, and a seminar to be cherished by delegates for a long time to come.

**CONGRATULATIONS WE HAVE DONE IT BRILLIANTLY ALL OVER AGAIN**



Rtn. Dr. Harish Nayak
**Event Chairman - Vistara**

## Secretary's Report Highlights



**VISTARA DISTRICT SEMINAR ON MEMBERSHIP DEVELOPMENT**

The District seminar hosted by our club on **10th August 2024** at 4:00 PM AT Kadiga Greens Multi Purpose Hall Belvai a Record No of Registration of 604 is done by the Rotarians of various Clubs. The programme is inaugurated by Rtn Vikramdatta District Governer RID 3181. Presided by Rtn Ravi Prasad Upadhyaya President Host Club. Key not speaker is PDG Rtn. Dr. Deepak Purohit Rotary coordinator Zone 7 Guest of Honour PDG Rtn Gopinath R (ARC) Bellary and vote of thanks by Rtn K Rathnkar Jain Secretary Host Club. Delicious Food and Fellowship is also arranged. Programme is a grand success.

**12-08-2024** Installation of new office bearers of Interact Club of Rotary English Medium School, Rotary P.U. College and Rotary C.B.S School held at Sammilana Hall.

**15-08-2024** Independence Day is celebrated in Rotary Institutions. Rtn.Raviprasad Upadhyaya President of Rotary Club Moodbidri was the Chief Guest and hoisted the National Flag. Rotary members, all staff members and students of Rotary Education Institutions also participated.

**15-08-2024** Vanamahotsava was celebrated in R.E.M School, Rotary C.B.S School, and Rotary P.U. College Building ground – jointly with Forest Department and Inner Wheel Club.

**15-08-2024** We are glad to inform that our Club participated in Independence Day Freedom Cup Cricket held at Mahaveera College Ground and Rotary Club Moodbidri won the Cup.

**19-08-2024** Weekly meeting held "Avalokana" - sharing of success stories of our seminar—"Vistara" District Seminar on Membership Development, Retention, Club Extension and Public Image held on 10-08-2024.

Rtn. Suresh Jain, Rtn. Yathikumar Swamy Gowda, Rtn. K.R. Pandith,Rtn. Pundikai Ganapayya Bhat, Rtn. Srikanth Kamath expressed their opinion.

Rtn. Dr. Harish Nayak Project Chairman thanked all the members for active participation and success of the programme.

**24-08-2024** and **25-08-2024** Members of our Club participated in District sports held at Puttur. Rtn Nagaraj B, Rtn Aravind Kini, Rtn Dayanad Mallya, Anne Sahana Bhat and Anne Dr. Mamatha Adiga, Annet Swastika won the prizes in Shuttle Badminton

**25-08-2024** Our members participated in T.S.D Car Rally held in Moodbidri and our members Rtn Mohd.Arif, Rtn Abulal and Rtn Ashraf Alangar won the prizes.

**25-08-2024** Our members participated in T.S.D Car Rally held in Moodbidri and our

members Rtn Mohd.Arif, Rtn Abulal and Rtn Ashraf Alangar won the prizes.

**27-08-2024** Boating facility in Kadalakere Lake to the public has been inaugurated by our M.L.A Sri.Umanath Kotian, Moodbidri Municipality President Mrs. Jayashree Keshav, Chief Officer Mrs. Indu and other officials of Moodbidri Municipality and Forrest Department are present.

**27-08-2024** Kadlakere Lake is a big Lake covering 18 acres and now it is full of water. It has many varieties of fishes. We have now added again 20,000/- of fish lingers to the Lake. Members of Rotary Club and Inner Wheel Club are present.

**31-08-2024** Moodubidire Traffic Awareness Group formed by R C Moodubidri. Subsequently we have included police department moodubidri municipality, Motor Driving schools and all schools of Moodubidire Town. The very purpose of the group is to create awareness among the general public and students about traffic rules. We had special program near Amaravathi Circle which is in the heart of Moodubidire Town. Sri Umanath Kotian MLA Inuagrated the program on **31-08-2024**. Police circle inspector and Moodubidire Municipality Officials are also present.

**- Rtn. K.Rathnakar Jain**

Secretary










## ROTA QUIZ - 03



Prepared by:
**Rtn. Pawan Pai**

### Note:

- Please submit your answers to the QR code provided within 48 hours of the bulletin's release.
- Good luck with the quiz!
- One lucky winner will receive a surprise gift at the next dinner meeting...




**Questions :**

1)Which was the worlds first non english speaking rotary club?

2)Which country holds the record of maximum participation in RI convention?

3)Which month is designated for rotary family?

4)what was the very first rotary service project?

5) Who was the rotary charitable trust president of our own rotary club of moodbidri in 2018?

Scan this QR code to initiate a direct WhatsApp message

Winner of the Last Month's ROTA QUIZ 2

**Rtn. Pawan Pai**

### Reader Feedback




Nicely compiled with new innovations and concepts. Hats off. Waiting eagerly for the next edition.

**- Rtn. Harish Nayak**

### Reader Opinion

Thank you so much for bringing out another beautiful bulletin. Good article and information. The memory of Independence Day by the respective parents of our Rotarians is well captured.

**- Rtn. Nagaraj B.**

## HAPPY BIRTHDAY

**Rtn. Abdul Rawoof - 1st September**
**Rtn Prajwal Acharya - - 1st September**
**Rtn. Ratnakar Jain K - 7th September**
**Rtn. Dr. Yathikumar S. Gowda - 11th September**
**Rtn. Srikanth Kamath - 13th September**
**Rtn. Narasimha Tantri - 15th September**
**Rtn. Dr. Sudeep Kumar - 16th September**
**Rtn. Bahubali Prasad - 29th September**

## HAPPY WEDDING ANNIVERSARY

**Rtn. Praveenchandra Jain - 12th September**
**Rtn. Hazdulla Ismail - 19th September**
**Rtn. Akram Sheik - 30th September**

Rtn. Prasad Shetty
8183006611
8183006622

L'ORÉAL PARIS
PROFESSIONNEL

Black N White
MOODBIDRI

Unisex salon /facial / Spa / bridal makeup / eyebrows /waxing / Hair style

BEST WISHES FROM

RTN. C.H. ABDUL GAFOOR
9901659965

- C.H. MEDICALS
- C.H. AYURVEDIC MEDICALS
- C.H. SURGICALS
- C.H. PET STORE
- DRY FRUITS ORGANYA

CH
SINCE 1992

MOODABIDIRE

CONTACT US
7892732540

To,

Book Post